62

# ನಿದ್ರಿಸುತ್ತಿರುವ ಶಿಷ್ಯರು

# (20:6-12)

ಅಪೊಸ್ತಲರ ಕೃತ್ಯಗಳು 20ರ ದಾಖಲೆಯಂತೆ, ಲೂಕನ ಸುವಾರ್ತೆ ಹಾಗೂ ಅಪೊಸ್ತಲರ ಕೃತ್ಯವನ್ನು ಪೌಲನು ತ್ರೋವವನ್ನು ಸಂಧಿಸಿದ ಕೆಲವಾರು ವರ್ಷಗಳಲ್ಲಿಯೇ ಬರೆಯಲಾಗಿರಬಹುದು. ಈ ಎರಡು ಪುಸ್ತಕಗಳನ್ನು ಬರೆದ ನಂತರ ಸಭೆಗಳು ಅದನ್ನು ತೆಗೆದುಕೊಂಡು ಓದಲು ಆರಂಭಿಸಿದರು.[1] ನೀವು ತ್ರೋವದ ಸಭಿಕರಾಗಿದ್ದು, ನಿಮ್ಮ ಸಭೆಯಲ್ಲಿ ಮೊದಲ ಸಾರಿ ಆ ಪುಸ್ತಕಗಳನ್ನು ಓದುವಂಥದ್ದನ್ನು ಊಹಿಸಿಕೊಳ್ಳಿರಿ. ಮೊದಲ ಬರಹದಲ್ಲಿ ಯೇಸುವಿನ ಚರಿತ್ರೆಯನ್ನು ಆಲಿಸಿದಾಗ, ಆಶ್ಚರ್ಯಪಡಲಿಲ್ಲವೇ. ನಂತರ ಎರಡನೆಯ ಪುಸ್ತಕವನ್ನು ಓದಲಾಗಿ ಅದರಲ್ಲಿ ಸುವಾರ್ತಾ ಪ್ರಸಾರಣವನ್ನು ಹಾಗೂ ಸಭಾ ಸ್ಥಾಪನೆಯ ಚರಿತ್ರೆಯನ್ನು ಗಮನಿಸುವಾಗ ಆಶ್ಚರ್ಯ ಚಕಿತರಾಗಲಿಲ್ಲವೇ. ಮೆಕೆದೋನ್ಯದ ಸಂಬಂಧದ ಕರೆಯಲ್ಲಿ, ತ್ರೋವದ ಹೆಸರು ಉಲ್ಲೇಖವಾಗಿರುವದರಿಂದ (ಅಪೊಸ್ತಲರ ಕೃತ್ಯಗಳು 16:8, 11) ಈ ಕೆಳಕಂಡ ಲೂಕನ ಮಾತುಗಳನ್ನು ಓದುವಾಗ, ವಿಶೇಷ ಸಂತೋಷವಾಗುವದಿಲ್ಲವೇ:

> ಹುಳಿಯಿಲ್ಲದ ರೊಟ್ಟಿಯ ಹಬ್ಬದ ದಿವಸಗಳನ್ನು ಪೂರೈಸಿದ ಮೇಲೆ ನಾವು ಫಿಲಿಪ್ಪಿಯಿಂದ ಹೊರಟು ಹಡಗನ್ನು ಹತ್ತಿ ಐದು ದಿವಸದಲ್ಲಿ ತ್ರೋವದಲ್ಲಿ ಬಂದು ಅವರನ್ನು ಸೇರಿದೆವು. ಅಲ್ಲಿ ಏಳು ದಿವಸಗಳಿದ್ದೆವು.
>
> ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡಿಸಿದನು (ಅಪೊಸ್ತಲರ ಕೃತ್ಯಗಳು 20:6, 7ಎ).

ತ್ರೋವವು ಪವಿತ್ರ ಚರಿತ್ರೆಯ ಒಂದು ಭಾಗವಾಗಿದ್ದರಿಂದ, ಅವರಿಗೆ ಆನಂದವಾಯಿತು!

ಕ್ಷಣಕಾಲ, ಹೇಗೂ ಓದುವವನು ಮುಂದುವರಿಸಿ:

> ಯೂತಿಕನೆಂಬ ಒಬ್ಬ ಯೌವನಸ್ಥನು ಕಿಟಕಿಯಲ್ಲಿ ಕೂತುಕೊಂಡು ಗಾಢನಿದ್ರೆಯಿಂದ ತೂಕಡಿಸಿದನು. ಪೌಲನು ಇನ್ನೂ ಪ್ರಸಂಗಮಾಡುತ್ತಾ ಇದ್ದಾಗ ಆ ಯೌವನಸ್ಥನು ನಿದ್ರೆಯಿಂದ ತೂಕಡಿಕೆ … (ವಚನ 9).

ಈ ವಿಷಯದ ಕುರಿತು ಅಲ್ಪ ಅವಮಾನವಾಗಬಹುದು, ಈ ಕಥೆಯನ್ನು ಕ್ರೈಸ್ತರು ಪುನಃ ಪುನಃ ಓದುವರು - ಈ ಘಟನೆಯ ಘಟಿಸುವಾಗ, ಜನರು ತ್ರೋವವನ್ನು ನೆನಪು ಮಾಡಿಕೊಳ್ಳುವರು.

ಈಗ ಸಭೆಯ ಒಬ್ಬ ಯೌವನಸ್ಥನ ಚಿತ್ರಣವನ್ನು ಊಹಿಸಿರಿ - ಅವನ ಹೆಸರು ಯೂತಿಕನು! ಈ ವಾಕ್ಯವನ್ನು ಓದುವಾಗ, ಅವನ ಮುಖವು ಕೆಂಪಗಾಗಿ, ಅವನು ತನ್ನ ಕುರ್ಚಿಯಲ್ಲಿ ಮುಳುಗಿ ಹೋದನೆ?

"ಸಭೆಯಲ್ಲಿ," ನಿದ್ರಿಸಿರವವರಲ್ಲಿ ಯಾತಿಕನು ಮೊದಲಿಗನಲ್ಲ.[2] ಮತ್ತು ನಿಶ್ಚಯವಾ

ಗಿಯು ಅವನು ಕೊನೆಯವನಲ್ಲ. ನಗೆಚಾಟಿಕೆಗಾಗಿ, "ಒಬ್ಬ ಪ್ರಸಂಗಿಯು" ನಿದ್ರೆಯಲ್ಲಿ ಮಾತನಾಡುವ ಒಬ್ಬ ವ್ಯಕ್ತಿಯ ಬಗ್ಗೆ ಬರೆದಿರುವನು ಅಥವಾ ಯೂತಿಕನ ಕುರಿತ, ಅವನ ಆತ್ಮೀಯ ವಂಶಜನು ಬರೆದು:

ನಾನು ನನ್ನ ಪ್ರಸಂಗಿಯ ಕಣ್ಣನ್ನು ನೋಡಲಾರೆ,
ದೈಹಿಕ ಬೆಳಕಿನಿಂದ ಅವುಗಳು ಅಡಗಿರುತ್ತವೆ;
ಅವನು ಪ್ರಾರ್ಥಿಸುವಾಗ, ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳುವೆನು;
ಅವನು ಪ್ರಸಂಗಿಸುವಾಗ, ನಾನು ಕಣ್ಣನ್ನು ಮುಚ್ಚುವೆನು.

ಮಧ್ಯ ಯುಗದಲ್ಲಿದ್ದ ಅಪೊಸ್ತಲರ ಸಭೆಯಲ್ಲಿ ವಿವಿಧ ಕಾರ್ಯಗಳಿಗಾಗಿ, ವಿವಿಧ ದೇವಜನರನ್ನು ನೇಮಕ ಮಾಡಿದ್ದರು:[3] ಯೋಸೇಫನು ಮರಗೆಲಸದ ಮಾದರಿಯಾಗಿದ್ದನು; ಯಾಕೋಬನು ಬೆಸ್ತರ ಮಾದರಿಯಾಗಿದ್ದನು. ಸಭೆಯಲ್ಲಿ ನಿದ್ರಿಸುವವರಿಗೆ, ಯೂತಿಕನು ಮಾದರಿಯಾಗಿದ್ದನು ಎಂಬದು ಕೆಲವರ ಅಭಿಪ್ರಾಯ!

ಈ ಅವಮಾನಕರವಾದ ಘಟನೆಗಳನ್ನು ಪರಿಶುದ್ಧಾತ್ಮನು ಏಕೆ ಹೊಸ ಒಡಂಬಡಿಕೆಯಲ್ಲಿ ತಿಳಿಸಿರುವನು? ಯೂತಿಕನನ್ನಾಗಲೀ ಅಥವಾ ತ್ರೋವದ ಸಭೆಯನ್ನು ಅವಮಾನ ಪಡಿಸುವದಕ್ಕಾಗಲೀ ಲೂಕನು ಇದನ್ನು ಬರೆದಿರುವದಿಲ್ಲ. ಆದರೆ ಇದರಲ್ಲಿ ನಾವು ಕಲಿಯಬೇಕಾದ ಪಾಠವನ್ನು ದೇವರು ತಿಳಿಸಿರುವನು. ನಮ್ಮ ಹಿಂದಿನ ಪಾಠದಲ್ಲಿ, ಆದಿ ಸಭೆಯಲ್ಲಿದ್ದ ಕುಟುಂಬ ವಾತಾವರಣದ ಕುರಿತು ಕಲಿತೆವು. ಈ ಅಧ್ಯಯನದಲ್ಲಿ, ಯೂತಿಕನ ನಿದ್ರಾಸ್ಥಿತಿಯ ಅಘಾತದ ಬಗ್ಗೆ ನೋಡುವವರಾಗಿದ್ದೇವೆ (ಎಚ್ಚರಿಕೆ; ನನ್ನ ಮಾತುಗಳು ನಿಮಗೆ ನಿದ್ರೆಯನ್ನುಂಟುಮಾಡಿ, ನಿಮ್ಮ ಕುರ್ಚಿಯಿಂದ ಬಿದ್ದು ಹೋಗುವದಾದರೆ, ನಿಮ್ಮನ್ನು ಎಬ್ಬಿಸಲು ಪೌಲನು ಇರುವದಿಲ್ಲ[4])!

## ಪ್ರಮುಖವಾದ ಪಾಠಗಳು

ಈ ಘಟನೆಯಿಂದ ಪಾಠವನ್ನು ಕಲಿಯುವ ಮೊದಲು, ಆ ಕಥೆಯನ್ನು ಪುನರಾವರ್ತಿಸೋಣ: ಪೌಲ ಮತ್ತು ಅವನ ಸಂಗಡಿಗರು, ಸಹೋದರರನ್ನು ವಾರದ ಮೊದಲನೆಯ ದಿನ ಸಂಧಿಸುವ ಸಲುವಾಗಿ ತ್ರೋವದಲ್ಲಿ ಒಂದು ವಾರಕಾಲ ಕಾದುಕೊಂಡಿದ್ದರು (ವಚನಗಳು 6, 7ಎ). ಅವರು ರೊಟ್ಟಿ ಮುರಿಯುವ ನಿಯಮಕ್ಕಾಗಿ ಸೇರಿ ಬರುವಾಗ, ಪೌಲನು ಪ್ರಸಂಗದ ಅವಕಾಶವನ್ನು ಪಡಕೊಂಡನು (ವಚನ 7ಬಿ). ಅವರನ್ನು ತಿರಿಗಿ ಕಾಣವದಿಲ್ಲವೆಂಬ ಯೋಜನೆಯನ್ನು ಅವನು ಹೊಂದಿದ್ದರಿಂದ, ಅವನು ಮರುದಿನವೇ ಹೊರಡುವವನಾಗಿದ್ದನು (ವಚನ 38), ಆದ್ದರಿಂದ "ಅವರಿಗೆ ಪ್ರಸಂಗಿಸಿ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡಿಸಿದನು" (ವಚನ 7ಸಿ). ಅವರು ಕೂಡಿದ್ದ ಮೇಲಂತಸ್ತಿನಲ್ಲಿ ಅನೇಕ ದೀಪಗಳಿದ್ದವು ಎಂದು ಲೂಕನು ತಿಳಿಸಿರುವನು - ಆ ಎಣ್ಣೆಯ ದೀಪಗಳು, ವಾತಾವರಣದ ಆಮ್ಲಜನಕವನ್ನು ಕಡಿಮೆ ಮಾಡಿರಬಹುದು (ವಚನ 8).

ಜನ ಜಂಗುಳಿಯಿಂದ ಕೂಡಿದ್ದ ಕೊಠಡಿಯಲ್ಲಿ, ಆಮ್ಲಜನಕದ ಕೊರತೆ ಉಂಟಾಗಿತ್ತು, ಮತ್ತು ತಡ ರಾತ್ರಿಯ ಸಮಯವಾಗಿದ್ದರಿಂದ, ಅದು ಒಬ್ಬನ ಮೇಲೆ ಪರಿಣಾಮವನ್ನು ಬೀರಿತ್ತು: "ಯೂತಿಕನೆಂಬ ಒಬ್ಬ ಯೌವನಸ್ಥನು ಕಿಟಕಿಯಲ್ಲಿ ಕೂತುಕೊಂಡು[5] ಗಾಢನಿದ್ರೆಯಿಂದ ತೂಕಡಿಸಿದ್ದನು"[6] (ವಚನ 9ಎ). "ಯೂತಿಕನು" ಎಂಬ ನಾಮದ ಅರ್ಥ "ಶುಭಹೊಂದಿದವನು" ಅಥವಾ "ಆನಂದ"[7] ಈ ಘಟನೆಯಲ್ಲಿ ಅದು ಯೋಗ್ಯವಾದ ಹೆಸ ರಾಗಿದೆ. "ಯೌವನಸ್ಥನಾದ" ಯೂತಿಕನು, ಅಂದರೆ ಗ್ರೀಕ್‌ನಲ್ಲಿ ನಾಲ್ವತ್ತು ವರ್ಷದವರೆಗೆ ಇರುವವರು. ಮೂಲ ವಾಕ್ಯದಲ್ಲಿ, ಅವನನ್ನು "ಬಾಲಕನು" ಎಂದು ಹೇಳಲಾಗಿದೆ, ಒಂದು ವೇಳೆ ಎಂಟರಿಂದ ಹದಿನಾಲ್ಕು ವರ್ಷಗಳ ವಯಸ್ಸಿನ (ಹುಡುಗ) ಬಾಲಕನಿರಬಹುದು (ವಚನ 12).

ಯೂತಿಕನ ಕುರಿತು, ಅನೇಕ ವರ್ಷಗಳಿಂದ ಕ್ಷೀಣವಾಗಿ ನಾವುಗಳು ಮಾತನಾಡಿರಬಹುದು. ಆ ದಿವಸಗಳಲ್ಲಿ ಬಾಲ ಕಾರ್ಮಿಕರ ಕಟ್ಟುಪಾಡುಗಳಿರಲಿಲ್ಲ; ಅವನು ಸಭೆಗೆ ಬರುವ ಮೊದಲು ಆಯಾಸಕರವಾದ ಕೆಲಸವನ್ನು ಮಾಡಿರಬಹುದು, ಅವರು ಸೇರಿ ಬಂದಿದ್ದ ವಾತಾವರಣವು ಅವನನ್ನು ನಿದ್ರೆಗೆ ತಳ್ಳಿರಬಹುದು. ಒಂದು ವೇಳೆ ಅವನು ವಯೋವೃದ್ಧನಿಗೆ[8] ತನ್ನ ಕುರ್ಚಿಯನ್ನು ನೀಡಿದ್ದರಿಂದ, ಅವನು ಸಡಿಲವಾದ ಸ್ಥಳದಲ್ಲಿ ಕುಳಿತಿರಬಹುದು. ಹೇಗೂ ಅವನು ಚಿಕ್ಕ ಪ್ರಾಯದವನೂ, ಮತ್ತು ಹಿತವಲ್ಲದ ವಾತಾವರಣದಲ್ಲಿ ಇದ್ದದ್ದರಿಂದಲೂ ಹಾಗೂ ದೇವ ಜನರ ಸಹವಾಸಕ್ಕೆ ಬಂದ್ದದರಿಂದಲೂ ಮತ್ತು ಆ ಕೂಟವು ಬಹಳ ಸಮಯ ನಡೆದದ್ದರಿಂದಲೂ, ಯೂತಿಕನು ಸಭೆಯನ್ನು ಬಿಟ್ಟು ಹೋಗಲಿಲ್ಲ! ಕರ್ತನನ್ನು ಪ್ರೀತಿಸಿದ, ಸಭೆಯನ್ನು ಪ್ರೀತಿ ಸಿದ, ಹಾಗೂ ಪ್ರಸಂಗದ ಸರಿ ಹೊತ್ತಿನವರೆಗೂ ತಾಳ್ಮೆಯಿಂದಿದ್ದ ಈ ಯೌವನಸ್ಥನ ಕುರಿತು ನಾನು ಸಂತೋಷಪಡುತ್ತೇನೆ!

ಹೇಗೂ, ಆ ಅಘಾತವು ಸ್ವಲ್ಪ ಸಮಯದಲ್ಲಿಯೇ ಜರುಗುವದಕ್ಕಿತ್ತು. ಆ ದಿವಸಗಳಲ್ಲಿ ಕಿಟಕಿಗಳು ಸರಳುಗಳನ್ನು ಹೊಂದದೆ, ಕೇವಲ ಬಾಗಿಲುಗಳನ್ನು ಮಾತ್ರ ಹೊಂದಿತ್ತು. ಆದ್ದರಿಂದ ಅವನು ಸರಾಗವಾಗಿ ಬೀಳಲು ಸಾಧ್ಯವಾಯಿತು. "ಪೌಲನು ತನ್ನ ಪ್ರಸಂಗವನ್ನು ಮಾಡುತ್ತಾ ಇದ್ದಾಗ ಆ ಯೌವನಸ್ಥನು ನಿದ್ರೆಯಿಂದ ತೂಕಡಿಕೆ ಹೆಚ್ಚಾಗಿ ಮೂರನೆಯ ಅಂತಿಸ್ತಿನಿಂದ ಕೆಳಕ್ಕೆ ಬಿದ್ದನು" (ವಚನ 9ಬಿ). (ಮರ್ಫಿಯ ನಿಯಮದಂತೆ,[9] ಒಬ್ಬನು ಕಿಟಕಿಯಿಂದ ಹೊರಗೆ ಬೀಳುವನೇ ಹೊರತು, ಒಳಕ್ಕೆ ಬೀಳು ವದಿಲ್ಲ.) ನಮ್ಮ ಹಿಂದಿನ ಪಾಠದಲ್ಲಿ, ಅವನನ್ನು "ಸಹೋದರರು ಎತ್ತಿ ನೋಡಿದಾಗ," ಅವರಲ್ಲಿ ಉಂಟಾದ ಉದ್ವೇಗದ ಚಿತ್ರಣವನ್ನು ನಾನು ನೀಡಿರುವೆನು (ವಚನ 9ಸಿ).

ಪೌಲನು, ಮೇಲಂತಸ್ತಿನಿಂದ ಇಳಿದು ಹೋಗುತ್ತಿದ್ದವರನ್ನೇ ಅನುಸರಿಸುತ್ತಿದ್ದನು (ವಚನ 10); ಅವನು ಇತರರಿಗಿಂತ, ವಯಸ್ಸಾದವನಾಗಿದದ್ದರಿಂದ, ನಿಧಾನವಾಗಿ ಇಳಿದಿರಬಹುದು.[10] ಅವನು ಆ ಹುಡುಗನನ್ನು ಸಂಧಿಸಿದಾಗ, "ಅವನ ಮೇಲೆ ಬಿದ್ದನು" (ವಚನ 10), ಒಂದು ವೇಳೆ ಎಲೀಯ ಮತ್ತು ಎಲೀಷನಂತೆ ಮಾಡಿರಬಹುದು (1 ಅರಸು 17:21; 2 ಅರಸು 4:34, 35). "ಅವನನ್ನು ತಬ್ಬಿಕೊಂಡ ನಂತರ ಗೋಳಾಡ ಬೇಡಿರಿ, ಅವನ ಪ್ರಾಣ ಅವನಲ್ಲಿ ಅದೆ" (ಅಪೊಸ್ತಲರ ಕೃತ್ಯಗಳು 20:10ಸಿ). ಅವನು ಸಾಯಲಿಲ್ಲ ಎಂಬುದು ಪೌಲನ ಮಾತಾಗಿರಲಿಲ್ಲ. "ಅವನು ಸತ್ತದ್ದರಿಂದ, ಎತ್ತಿದರು ಎಂದು ಲೂಕನು ತಿಳಿಸಿರವದಿಲ್ಲ" ಅಥವಾ "ಅವನು ಸತ್ತಿರುವನು" ಎಂದು ಅವರು ತಿಳಿಯಲಿಲ್ಲ. ಆದರೆ ವೈದ್ಯನಾದ ಲೂಕನು ಅವನು ಸ-ತ್ತಿ-ರು-ವ-ನು ಎಂದು ಹೇಳಿದನು (ವಚನ 9).[11] ಜೀವವು ಹುಡುಗನಲ್ಲಿ ಹಿಂದಿರುಗಿದೆ ಎಂದು ಪೌಲನು ಹೇಳಿರುವನು (ವಚನ 12). ಇದು ಅಭೂತ ಪೂರ್ವ ಅದ್ಭುತವಾಗಿದೆ: ಒಂದು ವೇಳೆ ಅವನ ಮುರಿದ ಮೂಳೆಗಳು ಸರಿಯಾಗಬೇಕಿತ್ತು, ಕೀಲುಗಳು ಹೊಂದಿಕೊಳ್ಳಬೇಕಿತ್ತು, ಅಪಾಯಕ್ಕೊಳಗಾದ ದೇಹದ ಭಾಗಗಳು ಕ್ರಮವಾಗಬೇಕಿತ್ತು, ಹರಿದು ಹೋದ ನರಗಳು ಪುನಃ ನಿರ್ಮಾಣವಾಗಬೇಕಿತ್ತು, ಹೃದಯವು ಪುನಃ ಕಾರ್ಯ ಪವೃತ್ತವಾಗಬೇಕಿತ್ತು!

ಕೆಲವರು, ಈ ಅಪೊಸ್ತಲರ ಶಕ್ತಿಯನ್ನು ಹೊಂದಿದ್ದೇವೆ ಎಂದು ಹೇಳಿಕೊಳ್ಳುವರು, ಆದರೆ ಯೂತಿಕನ ಸಂತಾನದವರ ಪ್ರತಿಯನ್ನು ಯಾರೂ ಸಹ ಎಂದಿಗೂ ನೋಡುವ ಸಾಧ್ಯತೆಯಿಲ್ಲ. "ನಂಬಿಕೆಯ ಸ್ವಸ್ಥತೆ ಕೂಟಗಳಲ್ಲಿ ಅಂದರೆ ಹೃದಯ ಸ್ತಂಬನವಾದವರನ್ನು ಕುರಿತ, ಅನೇಕ ಸುದ್ದಿ ಪತ್ರಿಕೆಗಳು ನನ್ನಲ್ಲಿವೆ," ಅವರ್‍ಯಾರು ಪುನಃ ಜೀವಿತರಾಗಲಿಲ್ಲ. "ಸ್ವಸ್ಥತಾ ಕೂಟವನ್ನು" ನಡಿಸುವದರಲ್ಲಿ ಉತ್ತಮನಾಗಿರುವ ಒಬ್ಬ ಮನುಷ್ಯನು ಕೂಟವನ್ನು ನಡಿಸುವಾಗ, ಅವನ ಗುಡಾರವು ಕುಸಿದು ಬಿದ್ದಿತು, ಅದರಲ್ಲಿ ಅನೇಕರು ಸತ್ತರು ಮತ್ತು ಅನೇಕರಿಗೆ ಗಾಯಗಳಾದವು. ಗುಣಪಡಿಸುವ ಪ್ರಸಂಗಿಯು, ಅವರಲ್ಲಿ ಯಾರನ್ನು ಎಬ್ಬಿಸಲಿಲ್ಲ ಮತ್ತು ಯಾರಿಗೂ ಸ್ವಸ್ತತೆಯನ್ನು ಉಂಟುಮಾಡಲಿಲ್ಲ. ಈ ದಿನಗಳ ಜನರು ಅಪೊಸ್ತಲರ ಶಕ್ತಿಯನ್ನು ಹೊಂದಿರುವದಿಲ್ಲ.

ಅನೇಕ ಕಾರಣಗಳಿಂದ ಪೌಲನು ಯೂತಿಕನನ್ನು ಮರಣದಿಂದ ಎಬ್ಬಿಸಿರಬಹುದು. ಮೊದಲನೆಯದಾಗಿ, ತ್ರೋವದಸಭೆ ಹಾಗೂ ಆ ಹುಡುಗನ ಕುರಿತು ಅವನು ಚಿಂತನೆ ಹೊಂದಿದ್ದನು. ಎರಡನೆಯದಾಗಿ, ಅವನು ಬೋಧಿಸಿದ ವಾಕ್ಯಕ್ಕೆ ಅದ್ಭುತವು ಒತ್ತು ನೀಡಿತ್ತು (ಮಾರ್ಕ 16:20). ಕೆಲವರು ಇದರಲ್ಲಿ ಇನ್ನೊಂದು ಉದ್ದೇಶವನ್ನು ನೋಡು ತ್ತಾರೆ ಸಭೆಯು ಯೇಸುವಿನ ಮರಣ ಪುನರುತ್ಥಾನದ ಆಚರಣೆಯನ್ನು ಮಾಡಿದರು ಎಂಬ ಹೋಲಿಕೆಯನ್ನು ನೀಡುತ್ತಾರೆ (ಅಪೊಸ್ತಲರ ಕೃತ್ಯಗಳು 20:7). ಆ ದಿನವೇ ಹುಡುಗನು ಮರಣದಿಂದ ಎದ್ದನು (ವಚನಗಳು 9:10). ಅದರಿಂದ ಸಭೆಯ ಪುನರುತ್ಥಾನದ ಪಾಠವನ್ನು ಕಲಿತುಕೊಂಡಿತ್ತು!

ಈ ಕಥೆಯಿಂದ, ಯಾವ ಪಾಠವನ್ನು ನಾವುಗಳು ಕಲಿಯಬಹುದು.

**ಕೇಳುವವರಿಗೆ ಒಂದು ಪಾಠ**

ಮೊದಲು, ಕೇಳುಗರಿಗಾಗಿ ಒಂದು ಪಾಠವಿದೆ. ಸಭೆಯಲ್ಲಿ ನಿದ್ರೆ ಮಾಡುವದು ಅವಮಾನ ಕರವಾದ ಸಂಗತಿಯಾಗಿದೆ. ನಾನು ಒಂದು ಸಾರಿ ಪ್ರಸಂಗ ಮಾಡುವಾಗ ಪಕ್ಕೆಯಲ್ಲಿ ಗಾಯಗೊಂಡ ಒಬ್ಬನನ್ನು, ಅವನ ಹೆಂಡತಿಯು ತನ್ನ ಮೊಣಕೈಗಳಿಂದ ತಿವಿಯುತ್ತಿದ್ದಳು. ಅವನ ಹೆಂಡತಿಯು ನನಗೆ, "ಜಾರ್ಜ್ ನಿದ್ರಿಸುವುದರಲ್ಲಿ ಅಭ್ಯಾಂತರವಿಲ್ಲ ಆದರೆ ಅವನು ಗೊರಕೆ ಹೊಡೆಯಬಾರದು" ಅದು ಇತರರಿಗೆ ಕಸಿವಿಸಿ ಮಾಡುತ್ತದೆ. ಸಭೆಯಲ್ಲಿ ಒಬ್ಬನು ನಿದ್ರಿಸುವ ಕುರಿತು, ಪ್ರತಿ ಪ್ರಸಂಗಿಯು ಒಂದು ಕಥೆಯನ್ನು ಹೊಂದಿರವನು. ಪ್ರಸಗಂವು ಆರಂಭವಾದ ನಂತರ, ಒಬ್ಬ ಹಾಡುಗಾರನು ನಿದ್ರೆಹೋದ ಕಥೆಯನ್ನು ನನ್ನ ಸ್ನೇಹಿತನು ನನಗೆ ಹೇಳಿರುವನು. ಪ್ರಸಂಗದ ಸಮಯದಲ್ಲಿ ಅವನು ಒಂದು ಕ್ಷಣ ಸ್ಥಬ್ದನಾದಾಗ ಆ ಹಾಡುಗಾರನು ಎಚ್ಚರವಾದನು. ಅಲ್ಲಿದ್ದ ಮೌನವನ್ನು ಗ್ರಹಿಸಿದ ಅವನು, ಪ್ರಸಂಗವು ಅಂತ್ಯವಾಯಿತೆಂದು ತಿಳಿದು ಎದ್ದು ನಿಂತು ಆಹ್ವಾನವನ್ನು ನೀಡುವ ಹಾಡನ್ನು ಹಾಡಲು ಪ್ರಾರಂಭಿಸಿದನು.[12]

ನೇರವಾಗಿ ಹೇಳುವದಾದರೆ, ಯೂತಿಕನಂತವರು ನಿದ್ರಿಸುವದಕ್ಕೆ ಒಳ್ಳೆಯ ಕಾರಣಗಳಿವೆ. ಕೆಲವರು ತಮ್ಮ ದೇಹದಲ್ಲಿ ಅನಾರೋಗ್ಯ ಹಾಗೂ ಆಯಾಸವು ಇರುವದರಿಂದ ನಿದ್ರಿಸಬಹುದು. ಔಷದಿಗಳನ್ನು ತೆಗೆದುಕೊಳ್ಳುವವರು ನಿದ್ರೆಯಿಂದ ಎಚ್ಚರವಾಗಿರಲು ಬಹಳ ಪ್ರಯತ್ನ ಮಾಡಬೇಕಾಗುತ್ತದೆ. ಕೆಲವರು ರಾತ್ರಿ ಪಾಳೆಯ ಕೆಲಸವನ್ನು ಮಾಡಿ ಸಭೆಗೆ ಬರುವದರಿಂದಲೂ ಆಯಾಸಗೊಳ್ಳುವರು. ಚಿಕ್ಕ ಮಕ್ಕಳ ತಾಯಂದಿರು ಸಹ ಆಯಾಸಗೊಳ್ಳುವರು. ನನ್ನ ಈ ಮಾತನ್ನು ಕೇಳಿರಿ: ನಿಮಗೆ ನಿದ್ರೆ ತರುವ ವಿಷಯಗಳ ಮೇಲೆ ನೀವು ನಿಯಂತ್ರಣವನ್ನು ಸಾಧಿಸುವುದಾದರೆ, ನಿಮ್ಮ ಕಣ್ಣುಗಳನ್ನು ಮುಚ್ಚದೆ ಇರುವದರಿಂದ ನಾನು ಕೃತಜ್ಞನಾಗಿರುವೆನು!

ಉಳಿದವರ ವಿಷಯವೇನು? ಶನಿವಾರ ರಾತ್ರಿ ದೂರದರ್ಶನವನ್ನು ನೋಡುತ್ತಲೂ, ಅಥವಾ ಸ್ನೇಹಿತರನ್ನು ಸಂಧಿಸುತ್ತಲೂ ಇದ್ದು, ಭಾನುವಾರ ಮುಂಜಾನೆ ನಿದ್ರೆಮಾಡುವವರ ಕುರಿತಾಗಿ ಏನು? ಆಸಕ್ತಿ ವಿಚಾರದಲ್ಲಿ ನಿರಾಸಕ್ತಿಯುಳ್ಳವರ ಕುರಿತಾಗಿ ಏನು? ಪ್ರೇರಿತವಾದ ಹಾಡುಗಳೇ ಇರಲಿ. ಬಲವಾದ ಪ್ರಾರ್ಥನೆಯೇ ಇರಲಿ, ಹೃದಯ ಸ್ಪರ್ಶಿಸುವ ಪ್ರಸಂಗವೇ ಇರಲಿ ಅವುಗಳು ಕೆಲವರಿಗೆ ಆಸಕ್ತಿ ಮೂಡಿಸದೆ ಇರುವಾಗ, ಅವರು ಮಂಜಾದ ಕಣ್ಣುಗಳನ್ನು ಹೊಂದಿಬೇಸರ ಗೊಂಡವರಾಗಿರುತ್ತಾರೆ. ಇಂಥವರ ಕುರಿತಾಗಿಯೇ ನಾನು ಚಿಂತನೆ ಮಾಡುತ್ತೇನೆ. ನಿಮ್ಮಲ್ಲಿ ಯಾರಾದರು ಈ ಗುಂಪಿಗೆ ಸೇರಿದವರಾಗಿದ್ದರೆ, ಗಮನಿಸುವ ಅಂಶವೇನೆಂದರೆ: ನೀವು ಮೂರನೇ - ಅಂತಸ್ಥಿನಿಂದ ಬಿದ್ದು ಸಾಯದೆ ಇರಬಹುದು, ಆದರೆ ನೀವು ನಿಮ್ಮ ಆತ್ಮೀಕ ಜೀವನದಲ್ಲಿ ಜಾರಿದು ಬೀಳುವವರಾಗಿರುವಿರಿ - ಒಂದು ವೇಳೆ ಆತ್ಮೀಕ ಮರಣವು ನಿಮಗೆ ಹತ್ತಿರವಾಗಿರಬಹುದು! ಎಚ್ಚರವಾಗಿ "ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸುವದನ್ನು" ಕಲಿಯಿರಿ (ಯೋಹಾನ 4:24)!

### ಪ್ರಸಂಗಿಗಳಿಗಾಗಿ ಒಂದು ಪಾಠ

ಯೂತಿಕನ ವಿಚಾರದಲ್ಲಿ ಪ್ರಸಂಗಿಗಳು ಸಹ ಒಂದೆರಡು ಪಾಠಗಳನ್ನು ಕಲಿಯಬಹುದು. ಪೌಲನು ಸರಿಹೋತ್ತಿನವರೆಗೂ ಪ್ರಸಂಗ ಮಾಡಿದ ಕಾರಣದಿಂದ, ಉದ್ದವಾದ ಪ್ರಸಂಗವು ವಾಕ್ಯಕ್ಕೆ[13] ಅನುಗುಣವಾಗಿದೆ ಎಂದು ಕೆಲವು ಪ್ರಸಂಗಿಗಳು ವಾದ ಮಾಡುವರು. ಪೌಲನು ಹಿಂದಿನ ಅಥವಾ ಮುಂದಿನ ಭಾನುವಾರವಾಗಲೀ ಅವರ ಸಂಗಡ ಇರದೆ ಇದ್ದದನ್ನು ಗಮನಿಸಿ. ಪ್ರತಿಭಾನುವಾರ ಸಭೆಯೊಂದಿಗೆ ಇರುವ ಪ್ರಸಂಗಿಗಳಿಗೂ ಹಾಗೂ ಪೌಲನಿಗೂ ವ್ಯತ್ಯಾಸವಿದೆ.

ಪೌಲನ ಉದ್ದವಾದ ಪ್ರಸಂಗವು ಅಪರೂಪವಾದ ಪ್ರಸಂಗವಾಗಿತ್ತು, ಆದರೆ ವಾರ ವಾರವು ಕಿವಿಯನ್ನು ಮೊರೈನ್ನಿಸುವ ಶಬ್ದದ ಅವಶ್ಯವಿರುವದಿಲ್ಲ. ಶರೀರ ಅಧ್ಯಯನದಲ್ಲಿ ಎರಡು ವಿಧದ ಅಂತ್ಯಗಳಿವೆ, ಇತರರು ಸಹಿಸುವದನ್ನು ಮಾತ್ರ ಮಾಡುವದು ಒಂದು ಅಂತ್ಯದೇವರ ಪ್ರತಿನಿಧಿಗಳಾಗಿ ಜನರಿಗೆ ಬೇಸರ ಬರುವ ಹಾಗೆ ಮಾತನಾಡಬಾರದು.

### ಪರಿಸರ ಕುರಿತ ಒಂದು ಪಾಠ

ದೈಹೀಕ ವಾತಾವರಣದ ಬಗ್ಗೆಯೂ ಒಂದು ಪಾಠವನ್ನು ಕಲಿಯಬಹುದು, ಅದು ಸೇರಿ ಬರುವ ಸ್ಥಳದ ಕುರಿತಾಗಿದೆ. ಅವರು ಸೇರಿ ಬಂದಿರುವ ಸ್ಥಳದಲ್ಲಿ, ಅನೇಕ ದೀಪ ಗಳು ಇದ್ದದರಿಂದ (ವಚನ 8) ಅಲ್ಲಿ ಆಮ್ಲಜನಕದ ಕೊರತೆ ಉಂಟಾಗಿರಬಹುದು ಎಂದು ಇನ್ನೊಂದು ಸಾರಿ ಉಲ್ಲೇಖಿಸುತ್ತೇನೆ. ಅಲ್ಲಿರುವ ವ್ಯಾಖ್ಯಾನದಂತೆ, “ಮೇಲಂತಸ್ಥಿನ ವಾತಾವರಣವು ಬಿಸಿಯಾಗಿಯೂ ಮತ್ತು ಒತ್ತಡವೂ ಇರಬಹುದು”[14] ಹಿಂದಿನ ಪಾಠದಲ್ಲಿ ಸಭೆಯಾಗಿ ಸೇರಿ ಬರುವ ಸ್ಥಳವು ಪ್ರಮುಖವಲ್ಲ ಎಂದು ತಿಳಿದಿರುವೆವು. ಆದರೆ ಆ ಸ್ಥಳವನ್ನು ಗುಣಾತ್ಮಕ ಮಾಡುವ ಅಗತ್ಯವಿದೆ - ಅದು ಎಲ್ಲೇ ಇರಲಿ - ಹೇಗೆ ಇರಲಿ - ಅದು ಆರಾಧನೆಗೆ ಯೋಗ್ಯವಾದ ಸ್ಥಳವಾಗಿರಬೇಕು. ಒಳ್ಳೆಯ ವಾತಾವರಣವಿಲ್ಲದ ಕೊಠಡಿಗಳು ಬಾಯಿಬಡುಕ ದೇವಜನರಿಗೆ ಅಡಚಣೆಯಾಗಿರುತ್ತದೆ.

## ಅತಿ ಪ್ರಮುಖವಾದ ಪಾಠ

ಆರಾಧನೆಯಲ್ಲಿ ನಿದ್ರೆ ಮಾಡುವದು ನಿಷೇದ ಎಂಬುದಕ್ಕೆ ಯೂತಿಕನ ನಿದರ್ಶನವನ್ನು ನೀಡಲಾಗಿದೆ, ಆ ಸಮಸ್ಯೆಯು ಉದ್ಭವಿಸಲೇಬಾರದು - ಆದರೆ ಕೆಲವು ಸಾರಿ ಧೈಹಿಕ ಬಲಹೀನತೆಗಳು ಆಯಾಸದಿಂದ ಉಂಟಾಗುತ್ತದೆ. ಕೆಲವು ಸಾರಿ ಅದು ಗಂಭೀರ ವಿಚಾರವಾಗುತ್ತದೆ; ಅದು ಆತ್ಮೀಕ ನಿದ್ರೆ. ಕರ್ತನ ಭೋಜನದ ಕುರಿತು ಪೌಲನು ಕೊರಿಂಥದವರನ್ನು ಎಚ್ಚರಿಸಿದಾಗ, ಅವರ ಆತ್ಮೀಕ ಪರಿಸ್ಥಿತಿಯ ಕುರಿತು ಕೆಲವು ಮುಖ್ಯ ಅಂಶಗಳನ್ನು ತಿಳಿಸಿರುವೆನು: ಈ ಕಾರಣದಿಂದಲೇ ನಿಮ್ಮಲ್ಲಿ “ಬಹು ಮಂದಿ ಬಲಹೀನರು ರೋಗಿಗಳು ಆಗಿದ್ದಾರೆ, ಮತ್ತು ಅನೇಕರು *ನಿದ್ರಿಸುತ್ತಿದ್ದರು*” (1 ಕೊರಿಂಥ 11:30; ಒತ್ತಿ ಹೇಳಿದ್ದು ನನ್ನದು). “ನಿದ್ರಿಸುವ ಸಭೆಯ” ಕುರಿತು ನಾವು ಮಾತನಾಡುವಾಗ, ನಾವು ನಿಮ್ಮ ಸಭೆಗಳ ಕುರಿತು ನಾನು ಚಿಂತಿಸುತ್ತೇನೆ. ಆತ್ಮೀಕ ನಿದ್ರೆಗೆ ತುತ್ತಾಗಿರುವ ಸಭೆಯನ್ನು ಎಬ್ಬಿಸುವುದೇ, ಪ್ರಸಂಗಿಯ ಪ್ರಮುಖ ಅಂಶವಾಗಿರುತ್ತದೆ!

ಆತ್ಮೀಕವಾಗಿ ನಿದ್ರಿಸುತ್ತಿರುವ - ತಲೆಗಳಿಗೆ ಪೌಲನು ಸವಾಲು ನೀಡಿರುವನು (ರೋಮಾಪುರ 13:11). ಪುನಃ ಅವನು ಬರೆದು, “ಆದದರಿಂದ ನಿದ್ರೆ ಮಾಡುವವನೇ, ಎಚ್ಚರವಾಗು! ಸತ್ತವರನ್ನು ಬಿಟ್ಟು ಎಳು! ಕ್ರಿಸ್ತನು ನಿನಗೆ ಪ್ರಕಾಶ ಕೊಡುವನು” (ಎಫೆಸ 5:14).

ಒಂದು ವೇಳೆ ನಾವು ತ್ರೋವದ ಸಹೋದರರನ್ನು ಅನುಸರಿಸುವುದಾದರೆ, ಅದು ನಮಗೆ ಚೇತನವನ್ನು ನೀಡುತ್ತದೆ: ಅವರು ಹಾಜರಿಯಲ್ಲಿಯೂ ಮತ್ತು ಕರ್ತನ ಭೋಜನದಲ್ಲಿಯೂ ನಂಬಿಗಸ್ತರಾಗಿದ್ದರು, ಅವರು ದೇವರ ವಾಕ್ಯಕ್ಕೂ ಮತ್ತು ಅದನ್ನು ಪ್ರಸಂಗಿಸಿದವನಿಗೂ

ನಂಬಿಗಸ್ತರಾಗಿದ್ದರು. ವಾತಾವರಣದ ಸನ್ನಿವೇಶ ಸರಿಯಲ್ಲಿದಿದ್ದರೂ ನಂಬಿಗಸ್ತರಾಗಿದ್ದರು. ನಾವು ಅವರ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕು.

## ಮುಕ್ತಾಯ

ಸಕಲ ಕೇಳುಗರಿಗೂ ಈ ಪಾಠವು ಅನ್ವಯಿಸುತ್ತದೆ: ಪ್ರತಿಯೊಬ್ಬರು ಆರಾಧನೆಯ ಸಮಯದಲ್ಲಿ, ಆದಷ್ಟು ಚಟುವಟಿಕೆಯಿಂದಿರಬೇಕು. ಪ್ರಸಂಗಿಗಳಾದ ನಮಗೂ ಎಚ್ಚರಿಕೆಯ ಮಾತುಗಳುಂಟು: ನಮ್ಮ ಪ್ರಸಂಗಗಳು ಜೀವದಿಂದಲೂ, ಸವಾಲಿನಿಂದಲೂ ತುಂಬಿರಬೇಕು. ಆತ್ಮೀಕ ವಿಚಾರದಲ್ಲಿ ನಿರಾಸಕ್ತಿ ಇರವವರಿಗಾಗಿ ಒಂದು ಪ್ರಮುಖ ಪಾಠವಿದೆ, ಅದೇನೆಂದರೆ, "ಆದಕಾರಣ ನಾವು ಇತರರಂತೆ ನಿದ್ದೆ ಮಾಡದೆ ಎಚ್ಚರವಾಗಿರೋಣ, ಸ್ವಸ್ಥ ಚಿತ್ತರಾಗಿರೋಣ" (1 ಥೆಸಲೋನಿಕ 5:6)!

---

ಟಿಪ್ಪಣಿಗಳು

[1]*ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದ ಪರಿಚಯ ವಿಚಾರ ನೋಡಿರಿ. [2]"ಸಭೆ" ಎಂದರೆ "ಆರಾಧನೆ." ಸಭೆಯ ಕುರಿತು *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿ *"ಪದಗಳ ಪಟ್ಟಿ: ಭಾಗ ಎರಡು"* ನೋಡಿರಿ. ಮುಂದಿನ ಪಾಠದಲ್ಲಿ ಆ ಪದವನ್ನು ಸ್ಪಷ್ಟ ಮಾಡಲಾಗಿದೆ. [3]ಸತ್ಯವೇದವು ನಂತರ ಮಾದರಿಯನ್ನು ಬೋಧಿಸುವದಿಲ್ಲ, ಇದು ನನಗೆ ವ್ಯಾಖ್ಯಾನವಾ ಗಿದೆ. ಕೆಲವು ಹಿನ್ನೆಲೆಯಲ್ಲಿ ಇದರ ಕುರಿತು ಪ್ರಸಂಗ ಅಥವ ಬೋಧನೆ ಮಾಡಬಾರದು. [4]ಕಿಟಕಿಯಿಲ್ಲದ ಕೊಠಡಿಯಲ್ಲಿ ಪ್ರಸಂಗಿಸಿದ, ಪ್ರಸಂಗಿಯು ಯೂತಿಕನ ಕುರಿತು "ನೀವು ಬೀಳಬಾರದೆಂದು ಕಿಟಕಿಯನ್ನು ಇಟ್ಟಿರುವದಿಲ್ಲ" ಎಂದು ಹೇಳಿರುವನು. ಆದಾಗ್ಯೂ ನೀವು ಬೀಳ ಬಹುದು. ಆದ್ದರಿಂದ ನಿಮಗೆ ನನ್ನ ಎಚ್ಚರಿಕೆ. [5]ಅದು ತನಗೆ ತಾನೇ ಉಂಟಾಯಿತು. [6]"ಹಿಪ್‌ನೋಸಿಸ್" ಎಂಬ ಗ್ರೀಕ್ ಪದದಿಂದ "ನಿದ್ರೆ" ಎಂಬ ಪದವಾ ಗಿದೆ. [7]ಅವನ ಹೆಸರಿನ ಮೂಲಕ ಅವನು ಬಿಡುಗಡೆಗೊಂಡ ದಾಸನಾಗಿದ್ದನು ಎಂಬ ಅಭಿಪ್ರಾಯವಿದೆ. [8]ಅವನು ಗಾಳಿಗಾಗಿ ಕಿಟಕಿಯ ಬಳಿಗೆ ಬಂದಾಗ, ತೂಕಡಿಸಿದನು ಎಂಬ ಅಭಿಪ್ರಾಯವಿದೆ. [9]ಅರ್ಥನಿಗೆ - ಅರ್ಥ ಗಂಭೀರತೆ, "ಮರ್ಫಿಲಾ" "ದ, ಲಾ" ತಪ್ಪಾದ ಸಂಗತಿಗಳು ನಡೆಯುವಾಗ ಬಳಸುವ ಪದಗಳು. [10]ಇತರರಂತೆ ಅವನು ಆನಂದಗೊಂಡಿರಬಹುದು, ಹುಡುಗನನ್ನು ಎಬ್ಬಿಸುವ ವಿಚಾರದಲ್ಲಿ.

[11]ಬಾಲಕನು ಸತ್ತಿರಬಹುದು ಅಥವಾ ಸಾಯದೆ ಇರಬಹುದು, ಆದಾಗ್ಯೂ ಅದ್ಭುತ ನಡೆಯಿತು. ಸ್ವಸ್ಥತೆಯ ಅದ್ಭುತ, ಆದರೆ ಬಾಲಕನು ಮರಣದಿಂದ ಎದ್ದನು ಎಂದು ವಾಕ್ಯ ಹೇಳುತ್ತದೆ - ಪೇತ್ರ ಪೌಲರ ಸೇವೆಯ ಹೋಲಿಕೆ: ಪೇತ್ರನು ದೊರ್ಕಳನ್ನು ಮರಣದಿಂದ ಎಬ್ಬಿಸಿದನು (ಅಪೊಸ್ತಲರ ಕೃತ್ಯಗಳು 9). ಪೌಲನು ಯೂತಿಕನನ್ನು ಎಬ್ಬಿಸಿದನು. [12]ವ್ಯಯಕ್ತಿಕ ಅನುಭವವನ್ನು ಇಲ್ಲಿ ಒಳಿತಾಗಬಹುದು. [13]"ಉದ್ದ" ಎಂಬುದು ಅಲ್ಪ ಎಂಬ ಅರ್ಥವನ್ನು ಹೊಂದಿರಬಹುದು. [14]Clarence Jordan, *The Cotton Patch Version of Luke and Acts* (Clinton, N.J.: New Win Publishing Co., 1969), 139. [15]ನೋಡಿರಿ ಸುವಾರ್ತೆಯು "ಸಭೆ" ಯಾಗಿದೆ *ಅಪೊಸ್ತಲರ ಕೃತ್ಯಗಳು, 1ನೇ* ಪುಸ್ತಕದಲ್ಲಿದೆ.